ದಿನಾಂಕ 21-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎನ್.ಆರ್.ಬಿ ವಕೀಲರಿಂದಃ**

1. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ಈ ದಾವೆಯನ್ನು ಆಸ್ತಿಯ ಸಂಬಂಧವಾಗಿ ಸಲ್ಲಿಸಿದ್ದೇನೆ. ಪ್ರತಿವಾದಿಯರು ವಾದಿಗಳಿಗೆ ರಕ್ತಸಂಬಂಧಿಗಳು ಇಲ್ಲವೆಂದು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅದರ ಸಂಬಂಧವಾಗಿ ನನ್ನ ತಂದೆಗೆ ಸಂಬಂಧಿಸಿದ ವಾರಸಾ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ವಾರಸಾ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪ್ರತಿವಾದಿಗಳು ಶಿವಮೂರ್ತೆಪ್ಪರವರೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ. 1 ನೇ ವಾದಿಯು ಶಿವಮೂರ್ತೆಪ್ಪರವರ ಮೊದಲನೇ ಹೆಂಡತಿ ಮತ್ತು 1 ನೇ ಪ್ರತಿವಾದಿಯು ಶಿವಮೂರ್ತೆಪ್ಪರವರ 2 ನೇ ಹೆಂಡತಿ ಎಂದರೆ ಸಾಕ್ಷಿಯು 1 ನೇ ವಾದಿಯನ್ನು ಹೊರತುಪಡಿಸಿ ಶಿವಮೂರ್ತೆಪ್ಪರವರಿಗೆ ಮತ್ತೊಬ್ಬ ಹೆಂಡತಿ ಇರಲಿಲ್ಲ ಎಂದು ನುಡಿಯುತ್ತಾರೆ. ನಿ.ಪಿ-11 ರ ಡ ನಮೂದಿನಲ್ಲಿ 1 ನೇ

ಪ್ರತಿವಾದಿಯ ಹೆಸರು ಶಿವಮೂರ್ತೆಪ್ಪರವರ 2 ನೇ ಹೆಂಡತಿ ಎಂದು ನಮೂದು ಇರುತ್ತದೆ ಎಂದರೆ ಗೊತ್ತಿಲ್ಲ. ಸದರಿ ದಾಖಲೆಯನ್ನು ಓದಿದರೆ ನನಗೆ ಗೊತ್ತಾಗುತ್ತದೆ. ಸಾಕ್ಷಿಯು ನಿ.ಪಿ-11 ರ ಕಂದಾಯ ನಮೂದನ್ನು ಓದಿದ ನಂತರ ಅದರಲ್ಲಿ ಚನ್ನಬಸಮ್ಮ ಮತ್ತು ಬಂಗಾರವ್ವ ಎಂಬುವವರು ಶಿವಮೂರ್ತೆಪ್ಪ ರವರ ಇಬ್ಬರು ಹೆಂಡತಿಯರು ಎಂದು ಬರೆಯಲಾಗಿದೆ ಎಂದು ಒಪ್ಪಿಕೊಳ್ಳುತ್ತಾರೆ. ಅದೇ ರೀತಿ ಸದರಿ ನಮೂದಿನಲ್ಲಿ 2 ನೇ ಪ್ರತಿವಾದಿಯು ಶಿವಮೂರ್ತೆಪ್ಪ ಮತ್ತು ಬಂಗಾರವ್ವ ರವರ ಮಗ ಎಂದು ನಮೂದು ಇದೆ ಎಂದರೆ ಸರಿ.



3. ಮೃತ ಶಿವಮೂರ್ತೆಪ್ಪರವರ ಕುಟುಂಬಕ್ಕೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇರುವುದಿಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಕಲಕೇರಿ ಗ್ರಾಮದ ಸ ನಂಃ14/13 ವಿಸ್ತೀರ್ಣ 1 ಎಕರೆ 2 ಗುಂಟೆ ಜಮೀನು ಮೊದಲಿಗೆ ಶಿವಮೂರ್ತೆಪ್ಪರವರ ಹೆಸರಿನಲ್ಲಿದ್ದು, ಅದನ್ನು ಶಿವಮೂರ್ತೆಪ್ಪ 1 ನೇ ಪ್ರತಿವಾದಿ ಹಾಗೂ ನಾನು ಜಂಟಿಯಾಗಿ ಪ್ರಕಾಶ ಕೊಪ್ಪದ ಎಂಬುವವರಿಗೆ ರೂ.31,000/- ಹಣಕ್ಕೆ ದಿಃ16-05-2002 ರಲ್ಲಿ ಮಾರಾಟ ಮಾಡಿದ್ದೆವು ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ನಾನು ಸಹಿ ಮಾಡಿದ್ದೆ ಎಂದರೆ ಗೊತ್ತಿಲ್ಲ.

ಸಾಕ್ಷಿಗೆ ಸದರಿ ಖರೀದಿ ಪತ್ರದ ಜೆರಾಕ್ಸ ಪ್ರತಿಯನ್ನು ತೋರಿಸಿ ಅದರಲ್ಲಿ 3 ನೇ ಸಾಕ್ಷಿದಾರರ ಸಹಿಯು ತನ್ನದೆಂದು ಸೂಚಿಸಿದ್ದಕ್ಕೆ ಸಾಕ್ಷಿಯು ನಿರಾಕರಿಸಿರುತ್ತಾರೆ. ಸದರಿ ಖರೀದಿ ಪತ್ರದಲ್ಲಿ 1 ನೇ ಪ್ರತಿವಾದಿಯ ಹೆಬ್ಬೆಟ್ಟಿನ ಗುರುತು ಇದೆ ಎಂದರೆ ಸರಿಯಲ್ಲ. ಅದೇ ರೀತಿ ಸಾಕ್ಷಿದಾರರ 4 ನೇ ದವರ ಹೆಬ್ಬೆಟ್ಟಿನ ಗುರುತು 1 ನೇ ವಾದಿಯ ಹೆಬ್ಬೆಟ್ಟಿನ ಗುರುತು ಎಂದರೆ ಸರಿಯಲ್ಲ. ಸದರಿ ಜೆರಾಕ್ಸ ಖರೀದಿ ಪತ್ರದಲ್ಲಿ ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಿ ಅದು 1 ನೇ ಪ್ರತಿವಾದಿಯ ಛಾಯಾ ಚಿತ್ರ ಎಂದರೆ ಅದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಮಾರಾಟ ಮಾಡಿದ ಸಂಗತಿಯು ನನಗೆ ಗೊತ್ತಿದ್ದರೂ ಮತ್ತು ಅದರ ಖರೀದಿ ಪತ್ರದಲ್ಲಿ ನನ್ನ ಸಹಿ ಹಾಗೂ 1 ನೇ ಪ್ರತಿವಾದಿ ಹಾಗೂ 1 ನೇ ವಾದಿ ಹೆಬ್ಬೆಟ್ಟಿನ ಗುರುತುಗಳು ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿಗೆ ನೀಡಿದ ಜಮೀನನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇತ್ತಾ ಎಂಬ ಸೂಚನೆಗೆ ಸಾಕ್ಷಿಯು ಆ ಜಮೀನಿನ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ನನ್ನ ತಂದೆ ಶಿವಮೂರ್ತೆಪ್ಪ 2001 ರ ಡಿಸೆಂಬರ್ ತಿಂಗಳಿನಲ್ಲಿ ಮರಣ ಹೊಂದಿರುತ್ತಾರೆ. ನನ್ನ ಮದುವೆಯು 2002 ರಲ್ಲಿ ಆಗಿರುತ್ತದೆ. ನನ್ನ ಮದುವೆಯು ಅಂತರ್ಜಾತಿ ವಿವಾಹ ಎಂದರೆ ಸರಿ. ನಾನು ಲಿಂಗಾಯಿತ ಜನಾಂಗದವರು ಮತ್ತು ನನ್ನ

ಗಂಡ ಬೋವಿ ಜನಾಂಗದವರು ಎಂದರೆ ಸರಿ. ನಮ್ಮ ಮದುವೆಯ ಸಲುವಾಗಿ ಸ ನಂಃ 14/13 ರ ಜಮೀನನ್ನು ಮಾರಾಟ ಮಾಡಲಾಗಿತ್ತು ಎಂದರೆ ಸರಿಯಲ್ಲ. ನನ್ನ ಮದುವೆಯ ವೆಚ್ಚವನ್ನು 1 ಮತ್ತು 2 ನೇ ಪ್ರತಿವಾದಿಗಳು ಭರಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಜೀವಿತಾವಧಿಯಲ್ಲಿ ಆಸ್ತಿ ಸಂಃ 78 ರ ಹಳೇಯ ಮನೆಯಲ್ಲಿ ವಾಸವಾಗಿದ್ದರು. ಸದರಿ ಹಳೇ ಮನೆಯನ್ನು ಹೊರತುಪಡಿಸಿ ಮತ್ತೊಂದು ಪಂಚಾಯಿತಿ ವ್ಯಾಪ್ತಿಯ ಮನೆಯು 1 ನೇ ವಾದಿಯ ಹೆಸರಿನಲ್ಲಿದೆ. ನನ್ನ ತಾಯಿ ಹೆಸರಿನಲ್ಲಿ ಇರುವ ಆಸ್ತಿ ಸಂಃ 227/19/1 ಎಂದರೆ ಸರಿ. ನನ್ನ ತಾಯಿಯ ಹೆಸರಿನಲ್ಲಿ ಇರುವ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಲಾಗಿದೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಮ್ಮ ಹಿಸ್ಸೇಗೆ ಬಂದ ಸ ನಂಃ 14/13 ರ ಜಮೀನು ಮತ್ತು ನನ್ನ ತಾಯಿ ಹೆಸರಿನಲ್ಲಿ ಇರುವ ಆಸ್ತಿ ಸಂಃ 227/19/1 ರ ಆಸ್ತಿಗಳನ್ನು ಮಾರಾಟ ಮಾಡಿಕೊಂಡು ಪ್ರತಿವಾದಿಯ ಹೆರಿನಲ್ಲಿ ಇರುವ ದಾವಾ ಆಸ್ತಿಗಳಿಗೆ ದುರುದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸ ನಂಃ 14/13 ರ ಜಮೀನಿನ ಖರೀದಿದಾರರಾದ ಪ್ರಕಾಶ ಕೊಪ್ಪದ ರವರನ್ನು ಈ ದಾವೆಯಲ್ಲಿ ಪಕ್ಷಕಾರರಾಗಿ ಮಾಡಲು ತೊಂದರೆ ಇತ್ತಾ ಎಂಬ ಸೂಚನೆಗೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿಯರ ಹಿಸ್ಸೇಗೆ ಬಂದ ದಾವಾ ಆಸ್ತಿಗಳನ್ನು ಕಬಳಿಸುವ ದುರುದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಗಂಡನ ಊರು ಚಿತ್ರದುರ್ಗ ಜಿಲ್ಲೆಯ, ಹೊಳಲ್ಕೆರೆ ತಾಲೂಕಿನ ವಿಶ್ವನಾಥ ನಗರ ಗ್ರಾಮ. ಮದುವೆ ಆದ ನಂತರ ನಾನು ಗಂಡನ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸಾಕ್ಷಿಯು ನನ್ನ ತಾಯಿಯ ಮನೆಯಲ್ಲಿಯೇ ವಾಸವಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಗಂಡನ ಮನೆಯಲ್ಲಿಯೇ ಖಾಯಂ ಆಗಿ ವಾಸವಿದ್ದರೂ, ತಾಯಿಯ



ಮನೆಯಲ್ಲಿ ವಾಸವಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗಂಡನ ಮನೆಯಲ್ಲಿ ವಾಸವಾಗಿರುವುದರಿಂದ ದಾವಾ ಆಸ್ತಿಗಳನ್ನು ವ್ಯವಸಾಯ ಮತ್ತು ವಹಿವಾಟು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಪ್ರತಿವಾದಿಗಳ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಹೆಸರಿನಲ್ಲಿ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಾನು ಯಾವ ವರ್ಷ ಕಾಪಿ ಸೀಮೆಗೆ ಕೆಲಸಕ್ಕೆ ಹೋಗಿದ್ದೆ ಎಂದ ನೆನಪಿಲ್ಲ. ಕಾಪಿ ಸೀಮೆಯಲ್ಲಿ ಸುಮಾರು 7 ರಿಂದ 8 ವರ್ಷಗಳವರೆಗೆ ಕೆಲಸ ಮಾಡಿದ್ದೆವು. ಕಾಪಿ

ಸೀಮೆಗೆ ನನ್ನ ತಂದೆ ಮರಣದ ನಂತರ ಹೋಗಿದ್ದೆವು. ಇಂದಿಗೂ ಸಹ ದಾವಾ ಎ ಜಮೀನುಗಳನ್ನು ಪ್ರತಿವಾದಿಯರೇ ವ್ಯವಸಾಯ ಮಾಡುತ್ತಿದ್ದು, ಬಿ ಆಸ್ತಿಯನ್ನು ಪ್ರತಿವಾದಿಯರು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಎ ಶೆಡ್ಯೂಲ್ ಜಮೀನಿನಲ್ಲಿ 2024 ರಲ್ಲಿ ಯಾವ ಫಸಲನ್ನು ಬೆಳೆಯಲಾಗಿತ್ತು ಎಂದು ಗೊತ್ತಿಲ್ಲ. ಶಿವಮೂರ್ತೆಪ್ಪ ರವರ ಮರಣದ ನಂತರ ದಾವಾ ಆಸ್ತಿಗಳ ಕರವನ್ನು ಮತ್ತು ಕಂದಾಯವನ್ನು ಪ್ರತಿವಾದಿಯರೇ ನಿರಂತರವಾಗಿ ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಶೆಡ್ಯೂಲ್ ಎ ಜಮೀನುಗಳ ವಿಮಾ ಮೊತ್ತವನ್ನು ಪ್ರತಿವಾದಿಗಳೇ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನುಗಳ ಬೆಳೆ ಹಾನಿ ಹಣವನ್ನು ಪ್ರತಿವಾದಿಯರೇ ಪಡೆಯುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನುಗಳ ಬೆಳೆ ಹಾನಿ ಹಣವನ್ನು ಯಾರು ಪಡೆಯುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ಹಿಸ್ಸೇಯನ್ನು ಪಡೆಯುವ ಉದ್ದೇಶದಿಂದ ವಾದಿಯರಿಗೂ ಮತ್ತು ಪ್ರತಿವಾದಿಯರಿಗೂ ರಕ್ತ ಸಂಬಂಧ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಯಾವ ಕಾಲದಲ್ಲೂ ದಾವಾ ಆಸ್ತಿಗಳ ಕಬ್ಜಾ ಮತ್ತು ವಹಿವಾಟಿನಲ್ಲಿ ಇಲ್ಲ ಎಂದರೆ ಸರಿಯಲ್ಲ.

8.ದಾವಾ ಜಮೀನುಗ ಚಕ್ಕುಬಂದಿಗಳು ನನಗೆ ಗೊತ್ತಿರುವುದಿಲ್ಲ. ದಾವಾ ಬಿ ಆಸ್ತಿಯ ಚಕ್ಕುಬಂದಿ ಗೊತ್ತಿರುತ್ತದೆ. ಪೂ- ಸುರೇಶ ಹಳ್ಳೂರ ರವರ ಆಸ್ತಿ, ಪ- ದೇವೇಂದ್ರಪ್ಪ ಹಳ್ಳೂರ ರವರ ಆಸ್ತಿ, ಉ- ದೇವೇಂದ್ರಪ್ಪ ಹಳ್ಳೂರ ರವರ ಆಸ್ತಿ ಮತ್ತು ದ- ಸರಕಾರಿ ರಸ್ತೆ. ದಾವಾ ಜಮೀನುಗಳ ವಹಿವಾಟನ್ನು ಮಾಡದೇ ಇರುವ ಕಾರಣಕ್ಕೆ ನನಗೆ ಅವುಗಳ ಚಕ್ಕುಬಂದಿಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ವ್ಯಾಜ್ಯ ಕಾರಣಗಳು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಗಳನ್ನು ವಹಿವಾಟು ಮಾಡಲು ತೊಂದರೆ ನೀಡಿದ ಕಾರಣಕ್ಕೆ ಈ ದಾವೆಯನ್ನು ಸಲ್ಲಿಸಲು ಕಾರಣಗಳು ಉಂಟಾಗಿರುತ್ತದೆ. ಸುಮಾರು 3 ವರ್ಷಗಳ ಹಿಂದೆ ಪ್ರತಿವಾದಿಗಳು ತೊಂದರೆ ನೀಡಿದ್ದು, ಅದರ ನಿಖರ ದಿನ,ತಿಂಗಳು ಮತ್ತು ವರ್ಷ ಗೊತ್ತಿಲ್ಲ. ನಾವು ದಾವಾ ಆಸ್ತಿಯ ಕಬ್ಜೆ ವಹಿವಾಟಿನಲ್ಲಿ ಇರದೇ ಇರುವ ಕಾರಣಕ್ಕೆ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ನ್ಯಾಯಾಲಯ ಶುಲ್ಕ ಪಾವತಿ ಮಾಡಬೇಕು ಎಂದರೆ ಸರಿ. ನಾನು ದಾವೆಯಲ್ಲಿ ಕೋರಿರುವ ಪರಿಹಾರಗಳಿಗೆ ಅರ್ಹರಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ